# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ/03/ಗ.ಕೋಶ–2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:06.02.2014

## ಸುತ್ತೋಲೆ

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೆಆರ್‌ಐಡಿಎಲ್ ಸಂಸ್ಥೆ ವತಿಯಿಂದ ಅನುಷ್ಠಾನಗೊಳಿಸಲು "ಅನುದಾನ ವರ್ಗಾವಣೆ ಆದೇಶ" ದ ಮುಖಾಂತರ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸುತ್ತೋಲೆ ಸಂಖ್ಯೆ:ಗ್ರಾಅಪ/03/ಗಣಕ ಕೋಶ–2013, ಬೆಂಗಳೂರು, ದಿನಾಂಕ:20.09.2013.

******

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಪ್ರಕ್ರಿಯೆಯಲ್ಲಿ ಸೂಕ್ತ ಶಿಸ್ತು ಮತ್ತು ನಿಯಂತ್ರಣವನ್ನು ತರಲು ಗಾಂಧಿ ಸಾಕ್ಷಿ ಕಾಯಕ ವರ್ಕ್‌ಸಾಫ್ಟ್ ತಂತ್ರಾಂಶದಲ್ಲಿ ಅಳವಡಿಸಿ ಸೃಜಿಸಲಾದ ಪಾವತಿ ಆದೇಶದ ಮುಖಾಂತರವೇ ಕಾಮಗಾರಿಗಳನ್ನು ನಿರ್ವಹಿಸಿದ ಬಿಲ್ಲುಗಳಿಗೆ ಪಾವತಿ ಮಾಡುವುದನ್ನು ದಿನಾಂಕ:03.10.2013ರಿಂದ ಕಡ್ಡಾಯಗೊಳಿಸಲಾಗಿತ್ತು. ಈ ಕುರಿತು ಪಾವತಿ ಆದೇಶವನ್ನು ಪಾವತಿಗೆ ಮೊದಲು ಪರಿಶೀಲಿಸುವಂತೆ ಎಲ್ಲಾ ಖಜಾನಾಧಿಕಾರಿಗಳು, ಬ್ಯಾಂಕ್ ವ್ಯವಸ್ಥಾಪಕರು ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಉಲ್ಲೇಖಿತ ಸುತ್ತೋಲೆಯ ಮುಖಾಂತರ ಆದೇಶ ನೀಡಲಾಗಿತ್ತು.

ಆದರೆ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಗೆ ವಹಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಮೊಬಲಗನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ/01/ಜಿಪಲೆ/2007, ದಿನಾಂಕ:19.01.2007 ರಂತೆ ಖಜಾನೆಯಿಂದ ಸ್ವೀಕರ್ತನ ರಶೀದಿ(Payees Receipt) ಮೇಲೆ ಡ್ರಾ ಮಾಡಬೇಕಾಗಿರುತ್ತದೆ. ಆದ್ದರಿಂದ "ಗಾಂಧಿ ಸಾಕ್ಷಿ ಕಾಯಕ" ತಂತ್ರಾಂಶದಲ್ಲಿ ಪಾವತಿ ಆದೇಶವನ್ನು ಸೃಜಿಸಲು ಸಾಧ್ಯವಿರುವುದಿಲ್ಲ. ಈ ಅಂಶವನ್ನು ಪರಿಶೀಲಿಸಿದ್ದು, ತಂತ್ರಾಂಶದಲ್ಲಿ "ಅನುದಾನ ವರ್ಗಾವಣೆ ಆದೇಶ" ವನ್ನು ಸೃಜಿಸಲು ಅವಕಾಶ ಕಲ್ಪಿಸಲಾಗಿದೆ. (ಮಾದರಿ ಪ್ರತಿ ಲಗತ್ತಿಸಿದೆ).

ಆದ್ದರಿಂದ ಇನ್ನು ಮುಂದೆ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಗೆ ಅನುದಾನ ವರ್ಗಾವಣೆ ಮಾಡುವಾಗ ತಂತ್ರಾಂಶದಲ್ಲಿ ಅಳವಡಿಸಿರುವ **"ಅನುದಾನ ವರ್ಗಾವಣೆ ಆದೇಶ"** ವನ್ನು ಸ್ವೀಕರ್ತನ ರಶೀದಿ(Payees Receipt) ಯೊಂದಿಗೆ ಜಿಲ್ಲಾ ಖಜಾನೆಗಳಿಗೆ ಸಲ್ಲಿಸಲು ಸೂಚಿಸಿದೆ. ಜಿಲ್ಲಾ ಖಜಾನೆಗಳು ಇಂಥ **"ಅನುದಾನ ವರ್ಗಾವಣೆ ಆದೇಶ"** ದೊಂದಿಗೆ ಸ್ವೀಕರಿಸಿದ ಸ್ವೀಕರ್ತನ ರಶೀದಿ ಬಿಲ್ಲುಗಳನ್ನು ಮಾನ್ಯ ಮಾಡಲು ಸೂಚಿಸಿದೆ.

ಮುಂದುವರೆದು ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಸಂಸ್ಥೆಯು ಅನುಷ್ಠಾನಗೊಳಿಸುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವಾಗ "ಗಾಂಧಿ ಸಾಕ್ಷಿ ಕಾಯಕ" ತಂತ್ರಾಂಶದ ಪಾವತಿ ಆದೇಶಗಳ ಮುಖಾಂತರ ಬಿಲ್ಲು ಪಾವತಿಸುವುದು ಮತ್ತು ಇದನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ರವರು ಖಚಿತಪಡಿಸಿಕೊಳ್ಳುವುದು ಹಾಗೂ ಇದರ ಆಧಾರದ ಮೇಲೆಯೇ ಉಪಯೋಗಿತಾ ಪ್ರಮಾಣ ಪತ್ರಗಳನ್ನು ಪಡೆದು ವರ್ಗಾವಣೆಯಾದ ಅನುದಾನಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದು.

**ಅಡಕ: "ಅನುದಾನ ವರ್ಗಾವಣೆ ಆದೇಶ"** ದ ನಮೂನೆ.

(ಟಿ.ಎಂ. ವಿಜಯ ಭಾಸ್ಕರ್)
ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು:

1. ನಿರ್ದೇಶಕರು, ಖಜಾನೆ ಇಲಾಖೆ, ಇವರಿಗೆ ಕಳುಹಿಸುತ್ತಾ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು ಮತ್ತು ತಾಲ್ಲೂಕು ಖಜಾನಾಧಿಕಾರಿಗಳಿಗೆ ಸೂಚನೆ ನೀಡಲು ಕೋರಿದೆ.

2. ಸಹಾಯಕ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, 2ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು, ಇವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್, ಇವರಿಗೆ ಮುಂದಿನ ಕ್ರಮಕ್ಕಾಗಿ.
4. ಜಿಲ್ಲಾ ಖಜಾನಾಧಿಕಾರಿಗಳು, ಎಲ್ಲಾ ಜಿಲ್ಲಾ ಖಜಾನೆ, ಮುಂದಿನ ಕ್ರಮಕ್ಕಾಗಿ ಹಾಗೂ ಈ ಕುರಿತು ಉಪ ಖಜಾನಾಧಿಕಾರಿಗಳಿಗೆ ಸೂಚನೆ ನೀಡಲು ತಿಳಿಸಿದೆ.
5. ಅಧೀಕ್ಷಕ ಇಂಜಿನಿಯರ್, ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ಇಂಜಿನಿಯರ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ, ಮತ್ತು PMGSY ಯೋಜನೆ.
6. ನಿರ್ದೇಶಕರು, ಕರ್ನಾಟಕ ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಸಂಸ್ಥೆ(KRWSSA), ಕಾವೇರಿ ಭವನ, ಕೆ.ಜಿ. ರೋಡ್, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು (KRIDL), ಬೆಂಗಳೂರು.
8. ಮುಖ್ಯ ಅಭಿಯಂತರರು(CE-PRED),ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
9. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು(COO-KRRDA), ಬೆಂಗಳೂರು.
10. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್ಐಸಿ, ಬೆಂಗಳೂರು.
11. ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತ್.
12. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಎಲ್ಲಾ ಗ್ರಾಮ ಪಂಚಾಯತ್.